ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\9205\2017\ಸನಿಕಾಸ–1 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:14/11/2017

ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ನಾಗರಾಜು ಬಿನ್ ಲೇ.ಗೋಪಾಲಯ್ಯ, #1656, ಹೌಸಿಂಗ್ ಬೋರ್ಡ್ ಕಾಲೋನಿ, ಹೆಚ್‌ಡಿ ಕೋಟೆ ಪಟ್ಟಣ, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಮೈಸೂರು ಜಿಲ್ಲೆ ಹೆಚ್‌ಡಿ ಕೋಟೆ ಪಟ್ಟಣ ಹೌಸಿಂಗ್ ಬೋರ್ಡ್ ಕಾಲೋನಿ ನಂ.1656 ನಿವಾಸಿಯಾದ ಶ್ರೀ.ನಾಗರಾಜು ಬಿನ್ ಲೇ.ಗೋಪಾಲಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಹೆಚ್‌ಡಿ ಕೋಟೆ ಪಟ್ಟಣದ ಭೂ ದಾಖಲೆಗಳ ಸಹಾಯಕ ನಿರ್ದೇಶಕರಾದ 1)ಶ್ರೀ.ಚಿಕ್ಕಣ್ಣ ಮತ್ತು 2) ಶ್ರೀಮತಿ.ರಮ್ಯ (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:–

ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ಪಟ್ಟಣದ ಸರ್ವೆ ನಂ.35/4ರ 2 ಗುಂಟೆ ಜಮೀನನ್ನು ಶ್ರೀ.ಮಹದೇವ ಬಿನ್ ಗೋವಿಂದಯ್ಯ ರವರಿಂದ ಕ್ರಯಕ್ಕೆ ಪಡೆದಿದ್ದು, ಸದರಿ ಜಮೀನಿನಲ್ಲಿ ಭೂ ಪರಿವರ್ತನೆ ಕೋರಿ ಸಕಾಲ ಯೋಜನೆಯಡಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಗೆ ವರದಿ ನೀಡುವಂತೆ ಆದೇಶಿಸಿದ್ದು, ಸದರಿಯವರು ರಸ್ತೆ ಅಸ್ತಿತ್ವದಲ್ಲಿರುವ ಬಗ್ಗೆ ಮಾಹಿತಿ ನೀಡಬೇಕಾಗಿದೆ. ಆದರೆ ಸದರಿ ಕ್ರಯ ಪತ್ರದಲ್ಲಿ ಪೂರ್ವಕ್ಕೆ ರಸ್ತೆ ಬಿಟ್ಟಿದ್ದು, ಸದರಿ ರಸ್ತೆಯನ್ನು ಅಧಿಕೃತವಾಗಿ ರಾಜ್ಯಪಾಲರ ಪರವಾಗಿ ಪುರಸಭೆಯ ಮುಖ್ಯಾಧಿಕಾರಿಗಳ ಹೆಸರಿಗೆ ದಾನಪತ್ರ ಮಾಡುವ ಸಲುವಾಗಿ ಮತ್ತು ಸದರಿ ಜಮೀನಿಗೆ ಸಂಬಂಧಪಟ್ಟಂತೆ 11ಇ ನಕ್ಷೆ ಕೋರಿ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಸ್ಥಳ ಪರಿಶೀಲನೆ ಮಾಡಿ, ಸಂಬಂಧಪಟ್ಟವರಿಂದ ಸಹಿ ಪಡೆದಿದ್ದಾರೆ. ಆದರೆ, ಸದರಿ ಜಮೀನಿಗೆ ಸಂಬಂಧಪಟ್ಟಂತೆ 11ಇ ನಕ್ಷೆ ನೀಡಲು ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸರ್ವೆ ನಂ.35/4 2 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ 11ಇ ನಕ್ಷೆ ಕೋರಿ ಶ್ರೀ.ಮಹದೇವ ಎಂಬುವವರು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಅಳತೆ ಕಾರ್ಯದ ಬಗ್ಗೆ ಪರವಾನಗಿ ಭೂ ಮಾಪಕರಾದ ಶ್ರೀ.ಎನ್.ಪಟ್ನಾಯಕ ಎಂಬುವವರಿಗೆ ಹಂಚಿಕೆ ಮಾಡಿದ್ದು, ಸದರಿಯವರು ಉಭಯ ಪಕ್ಷಗಾರರಿಗೆ ನೋಟೀಸ್ ನೀಡಿ, ಅಳತೆ ಮಾಡಿ ವರದಿ ನೀಡಿದ್ದಾರೆ. ಈ ಹಿಂದೆ ಆಕಾರ್‌ಬಂದ್‌ನಂತೆ ಸರ್ವೆ ನಂ.35/4ರ ಪೈಕಿ ಪೋಡಿ ದುರಸ್ತಾಗಿ 35/4, 35/55 ಮತ್ತು 35/57 ಎಂಬುದಾಗಿ ದಾಖಲಾಗಿದ್ದು, ಆರ್‌ಟಿಸಿ ಇಂಡೀಕರಣ ಆಗಿರುವುದಿಲ್ಲ. ಆಕಾರ್‌ಬಂದ್‌ನ ವಿಸ್ತೀರ್ಣಕ್ಕೂ ಆರ್‌ಟಿಸಿ ವಿಸ್ತೀರ್ಣಕ್ಕೂ ವ್ಯತ್ಯಾಸವಾಗಿರುವುದರಿಂದ ಸರಿಪಡಿಸುವ ಬಗ್ಗೆ ವರದಿ ಮಾಡಿದ್ದಾರೆ. ಅದನ್ನು ಕಛೇರಿಯಲ್ಲಿ ತಪಾಸಣಾ ಭೂ ಮಾಪಕರು ಹಾಗೂ ಪರ್ಯಾವೇಕ್ಷಕರು ಪರಿಶೀಲಿಸಿ, ತಕರಾರು ಲಾಗಿನ್‌ಗೆ ವರ್ಗಾಯಿಸಿ, ಪಹಣಿ ಪತ್ರಿಕೆ ಇಂಡೀಕರಣ ಮಾಡುವ ಬಗ್ಗೆ ತಹಶೀಲ್ದಾರ್‌ರವರಿಗೆ ಪತ್ರ ಬರೆಯಲಾಗಿದ್ದು, ದಿ:05/08/17ರಂದು ಪೋಡಿ ಇಂಡೀಕರಣ ಮಾಡಿರುವುದು ದಿ:26/08/17ರಂದು ಪಹಣಿ ಪರಿಶೀಲನೆ ಮಾಡಿರುವ ಸಂದರ್ಭದಲ್ಲಿ ತಿಳಿದು ಬಂದಿದೆ. ಆದರೆ, ಈ ಬಗ್ಗೆ ಪತ್ರ ಬಂದಿಲ್ಲ. ಸದರಿ ಅರ್ಜಿಯನ್ನು ದಿ:29/08/17ರಂದು ತಕರಾರು ಲಾಗಿನ್ ಇಂದ ಶ್ರೀ.ರಾಜೇಂದ್ರ ಪ್ರಸಾದ್, ಸರ್ಕಾರಿ ಭೂ ಮಾಪಕರಿಗೆ ಅಳತೆ ಬಗ್ಗೆ ಹಂಚಿಕೆ ಮಾಡಿದೆ. ಸದರಿಯವರಿಂದ ವರದಿ ಪಡೆದು ಉಪ ನಿರ್ದೇಶಕರಿಗೆ ಆಕಾರ್ ಬಂದ್ ತಿದ್ದುಪಡಿ ಬಗ್ಗೆ ಪ್ರಸ್ತಾವನೆ ಸಲ್ಲಿಸಿ, ತಿದ್ದುಪಡಿಯಾದ ನಂತರ ದೂರುದಾರರ ಕೋರಿಕೆಯಂತೆ 11ಇ ನಕ್ಷೆ ವಿತರಿಸಲಾಗುವುದು. ಕೆಲವು ತಾಂತ್ರಿಕ ಕಾರಣಗಳಿಂದ 11ಇ ನಕ್ಷೆ ವಿತರಿಸಲು ವಿಳಂಬವಾಗಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಹೆಚ್‌ಡಿ ಕೋಟೆ ಗ್ರಾಮದ ಸರ್ವೆ ನಂ.35/4ರ ಜಮೀನು ಶ್ರೀ.ಮಹದೇವ ಎಂಬುವವರಿಗೆ ಸಂಬಂಧಿಸಿದ್ದು, ಸದರಿ ಜಮೀನಿನಲ್ಲಿ 24 ಗುಂಟೆ ಜಮೀನನ್ನು ದೂರುದಾರರು ಕ್ರಯಕ್ಕೆ ಪಡೆದಿದ್ದು, ಆ ಪೈಕಿ 2 ಗುಂಟೆ ಜಮೀನಿಗೆ 11ಇ ನಕ್ಷೆ ಕೋರಿ ಶ್ರೀ.ಮಹದೇವ ಎಂಬುವವರು ನಾಡಾ ಕಛೇರಿಗೆ ಅರ್ಜಿ ಸಲ್ಲಿಸಿರುವುದು ಕಂಡು ಬಂದಿದೆ. ಅದರಂತೆ ಎದುರುದಾರರು ಶ್ರೀ.ಎಲ್.ಪಟ್ನಾಯಕ, ಪರವಾನಗಿ ಭೂ ಮಾಪಕರಿಗೆ ಅಳತೆ ಕಾರ್ಯ ನಿರ್ವಹಿಸಲು ಆದೇಶಿಸಿದ್ದು, ಸದರಿ ಜಮೀನಿನಲ್ಲಿ ಅಳತೆ ಮಾಡಿ ದುರಸ್ತ್ ಆಗಿ 35/4, 35/55 ಮತ್ತು 35/57 ಎಂಬುದಾಗಿ ದಾಖಲಾಗಿ ಆರ್‌ಟಿಸಿ ಯಲ್ಲಿನ ವಿಸ್ತೀರ್ಣಕ್ಕೂ ಆಕಾರ್‌ಬಂದ್‌ನಲ್ಲಿ ನಮೂದಿಸಲಾದ ವಿಸ್ತೀರ್ಣಕ್ಕೂ ವ್ಯತ್ಯಾಸವಾಗಿರುವುದರಿಂದ, ಸರಿಪಡಿಸುವ ಬಗ್ಗೆ ಎದುರುದಾರರಿಗೆ ವರದಿ ನೀಡಿದ್ದು, ಅದರಂತೆ ತಕರಾರು ಪ್ರಕರಣವೆಂದು ಪರಿಗಣಿಸಿ, ಸರಿಪಡಿಸಿ ವರದಿ ಮಾಡುವಂತೆ ತಹಶೀಲ್ದಾರ್‌ರವರಿಗೆ ಪತ್ರ ಬರೆದಿರುವುದು ಕಂಡು ಬಂದಿದೆ. ಅದರಂತೆ, ಪೋಡಿ ಇಂಡೀಕರಣ ಮಾಡಿರುವುದು ಸಹ ಪಹಣಿ ಪತ್ರಿಕೆಯನ್ನು

ಪರಿಶೀಲಿಸಲಾಗಿ ಕಂಡು ಬಂದಿದೆ. ಆ ನಂತರ, ಸದರಿ ಜಮೀನಿಗೆ ಸಂಬಂಧಪಟ್ಟಂತೆ ಅಳತೆ ಮಾಡಿ ವರದಿ ಮಾಡುವಂತೆ ಶ್ರೀ.ರಾಜೇಂದ್ರ ಪ್ರಸಾದ್ ಎಂಬ ಸರ್ಕಾರಿ ಭೂ ಮಾಪಕರಿಗೆ ಹಂಚಿಕೆ ಮಾಡಿದ್ದು, ಸದರಿಯವರು ತುರ್ತಾಗಿ ವರದಿ ಸಲ್ಲಿಸಿ ಆಕಾರ್ ಬಂದ್ ತಿದ್ದುಪಡಿ ಮಾಡುವ ಬಗ್ಗೆ ಅರ್ಜಿ ಸಲ್ಲಿಸಿದ್ದು, ಭೂ ದಾಖಲೆಗಳ ಉಪ ನಿರ್ದೇಶಕರು ಸದರಿ ಆಕಾರ್ ಬಂದ್ ತಿದ್ದುಪಡಿ ಮಾಡುವ ಅಧಿಕಾರ ಇದೆ.

6. ಆದ್ದರಿಂದ, ಸದರಿ ಜಮೀನಿಗೆ ಸಂಬಂಧಪಟ್ಟಂತೆ ಆಕಾರ್ ಬಂದ್ ತಿದ್ದುಪಡಿ ಮಾಡಿ, 11ಇ ನಕ್ಷೆ ತಯಾರಿಸಿಕೊಡುವ ಬಗ್ಗೆ ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 14/11/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.